# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ | : | 1478 |
| ವಿಧಾನ ಪರಿಷತ್ತು ಸದಸ್ಯರ ಹೆಸರು | : | ಶ್ರೀಮತಿ. ಎಸ್. ವೀಣಾ ಅಚ್ಚಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ತೋಟಗಾರಿಕೆ ಮತ್ತು ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 24-09-2021 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಮಾಡಿಟಿ ಬೋರ್ಡ್ (Commodity Board) ರಚನೆ ಮಾಡಿ, ತೋಟಗಾರಿಕಾ ವಾಣಿಜ್ಯ ಬೆಳೆಗಳನ್ನು ಅದರ ವ್ಯಾಪ್ತಿಯಲ್ಲಿ ತರಲಾಗಿದೆಯೇ; | ಹೌದು.<br>ರಾಜ್ಯ ಸರ್ಕಾರವು ತೋಟಗಾರಿಕೆ ಬೆಳೆಗಳಿಗೆ ಸಂಬಂಧಿಸಿದ ಕಮಾಡಿಟಿ ಬೋರ್ಡ್ ಗಳನ್ನು ರಚನೆ ಮಾಡಿರುತ್ತದೆ. ಅವುಗಳೆಂದರೆ, ಮಾವು ನಿಗಮ, ದ್ರಾಕ್ಷಾರಸ, ಲಿಂಬೆ, ಸಾಂಬಾರು ಪದಾರ್ಥಗಳಿಗೆ ಮಂಡಳಿಗಳು ಮತ್ತು ತೋಟಗಾರಿಕೆ ಉತ್ಪನ್ನಗಳ ಮಹಾಮಂಡಳಿ ಇವುಗಳನ್ನು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ, 1960/ ಕಂಪನಿ ಕಾಯ್ದೆ 1956 ರನ್ವಯ ರಚಿಸಲಾಗಿರುತ್ತದೆ. |
| ಆ) | ಇದುವರೆಗೆ ರಚನೆಯಾಗದಿದ್ದಲ್ಲಿ, ಕಮಾಡಿಟಿ ಬೋರ್ಡ್ (Commodity Board) ರಚನೆ ಮಾಡಲು ಸರ್ಕಾರ ಈ ಕೂಡಲೇ ಸೂಕ್ತ ಕ್ರಮವಹಿಸುವುದೇ; | ಇವುಗಳ ವ್ಯಾಪ್ತಿಯಲ್ಲಿ ಮಾವು, ದ್ರಾಕ್ಷಾರಸ, ಲಿಂಬೆ ಮತ್ತು ಲಿಂಬೆ ಜಾತಿಗೆ ಸೇರಿದ ಹಣ್ಣುಗಳು, ಸಾಂಬಾರು ಪದಾರ್ಥಗಳು ಹಾಗು ವಿವಿಧ ತೋಟಗಾರಿಕೆ ಉತ್ಪನ್ನಗಳ ಬೆಳೆಗಳನ್ನು ತರಲಾಗಿದೆ.<br>ಸದರಿ ನಿಗಮ/ಮಂಡಳಿಗಳ ಸ್ಥಾಪನೆ ವಿವರ ಈ ಕೆಳಕಂಡಂತಿದೆ. |

| ಕ್ರ.ಸಂ | ನಿಗಮ/ಮಂಡಳಿ | ಆದೇಶದ ದಿನಾಂಕ |
|---|---|---|
| 1. | ಕರ್ನಾಟಕ ರಾಜ್ಯ ಸಹಕಾರಿ ತೋಟಗಾರಿಕಾ ಮಾರಾಟ ಮಹಾ ಮಂಡಳಿ (ನಿ) (ಕೆ.ಹೆಚ್.ಎಫ್), ಬೆಂಗಳೂರು. | 25.10.1996 |
| 2. | ಕರ್ನಾಟಕ ದ್ರಾಕ್ಷಾ ರಸ ಮಂಡಳಿ, ಬೆಂಗಳೂರು. | 14.03.2007 |
| 3. | ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ (ನಿ) ಬೆಂಗಳೂರು. | 08.06.2010 |
| 4. | ಕರ್ನಾಟಕ ರಾಜ್ಯ ಸಾಂಬಾರು ಪದಾರ್ಥಗಳ ಅಭಿವೃದ್ಧಿ ಮಂಡಳಿ, ಹುಬ್ಬಳಿ. | 29.03.2014 |
| 5. | ಕರ್ನಾಟಕ ರಾಜ್ಯ ಲಿಂಬೆ ಅಭಿವೃದ್ಧಿ ಮಂಡಳಿ, ಇಂಡಿ, ವಿಜಯಪುರ. | 16.05.2017 |

ಭಾರತ ಸರ್ಕಾರವು ಈ ಕೆಳಗಿನ ತೋಟಗಾರಿಕೆ ಬೆಳೆಗಳಿಗೆ ಸಂಬಂಧಿಸಿದ ಕಮಾಡಿಟಿ ಬೋರ್ಡ್ ಗಳನ್ನು ರಚನೆ ಮಾಡಿರುತ್ತದೆ

1. ಕಾಫಿ ಬೋರ್ಡ್
2. ಟೀ ಬೋರ್ಡ್
3. ಸಾಂಬಾರು ಮಂಡಳಿ
4. ತೆಂಗು ಅಭಿವೃದ್ಧಿ ಮಂಡಳಿ
5. ತೆಂಗಿನ ನಾರು ಮಂಡಳಿ
6. ರಬ್ಬರ್ ಮಂಡಳಿ

Yes

In Karnataka State, different Horticulture Boards/Corporations have been established. Namely, Mango Corporation, Wine, Lime, Spice Boards and for Horticultural produce a Federation have been created under Karnataka Societies Registration Act, 1960 / Company Act 1956. The crops like Mango, Grape, Lime and citrus fruits, Spice and various horticultural produces are considered in these boards/ corporations.

The details are as follows.

| Sl. No. | Boards/ Corporations | Date of GO |
|---|---|---|
| 1. | Karnataka State Cooperative Horticulture Marketing Federation (KHF), Bangalore. | 25.10.1996 |
| 2. | Karnataka State Wine Board, Bangalore. | 14.03.2007 |
| 3. | Karnataka State Mango Development and Marketing Corporation, Bangalore. | 08.06.2010 |
| 4. | Karnataka State Spices Development Board, Hubli. | 29.03.2014 |
| 5. | Karnataka State Lime Development Board, Indi, Vijayapur. | 16.05.2017 |

The Commodity Boards formed by Government of India related to Horticulture Crops are as follows

1. Coffee Board
2. Tea Board
3. Spice Board
4. Coconut Development Board
5. Coir Board
6. Rubber Board

ಇ) ಕಮಾಡಿಟಿ ಬೋರ್ಡ್ (Commodity Board) ರಚನೆ ಮಾಡಿ ತೋಟಗಾರಿಕೆ ಬೆಳೆಗಾರರಿಗೆ ವಾಣಿಜ್ಯ ಬೆಳೆಗಳನ್ನು ಬೆಳೆಯಲು ಉತ್ತೇಜನ ನೀಡಲು ಸರ್ಕಾರ ಮುಂದಾಗುವುದೇ

**ಹೌದು.**

**ರಾಜ್ಯದಲ್ಲಿ ಈಗಾಗಲೇ ತೋಟಗಾರಿಕೆ ಇಲಾಖೆಯು ತೋಟಗಾರಿಕೆ ನಿಗಮ/ ಮಂಡಳಿಗಳ ಸ್ಥಾಪನೆಯಿಂದ ತೋಟಗಾರಿಕೆ ಬೆಳೆಗಾರರಿಗೆ ವಾಣಿಜ್ಯ ಬೆಳೆಗಳಾದ ಮಾವು, ದ್ರಾಕ್ಷಿ, ಲಿಂಬೆ/ಲಿಂಬೆ ಜಾತಿಯ ಬೆಳೆಗಳು ಹಾಗೂ ಸಾಂಬಾರು ಪದಾರ್ಥಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಕಾರ್ಯಕ್ರಮಗಳನ್ನು "ತೋಟಗಾರಿಕೆ ನಿಗಮ/ ಮಂಡಳಿಗಳಿಗೆ ಸಹಾಯಧನ ಯೋಜನೆ" ಯಡಿ ಹಮ್ಮಿಕೊಂಡು ಉತ್ತೇಜನ ಒದಗಿಸಲಾಗಿರುತ್ತದೆ.**

**1. ಕರ್ನಾಟಕ ರಾಜ್ಯ ಸಹಕಾರಿ ತೋಟಗಾರಿಕೆ ಮಾರಾಟ ಮಹಾಮಂಡಳ (ನಿ):**

- ಜಿಲ್ಲಾ ಹಾಪ್ ಕಾಮ್ಸ್ ಗಳ ಮೂಲಕ ಸದಸ್ಯ ರೈತರಿಗೆ ಶೇ.50ರ ಸಹಾಯ ಧನದಲ್ಲಿ ಪ್ಲಾಸ್ಟಿಕ್ ಕ್ರೇಟ್ಸ್ ಗಳನ್ನು ವಿತರಣೆ ಮಾಡಲಾಗಿದೆ. ಶೇಖರಣೆ ಮತ್ತು ಸಾಗಣೆ ಮಾಡುವಾಗ ಪ್ಲಾಸ್ಟಿಕ್ ಕ್ರೇಟ್ಸ್ ಗಳ ಬಳಕೆಯಿಂದ ಹಣ್ಣು ಮತ್ತು ತರಕಾರಿಗಳ ಗುಣಮಟ್ಟವನ್ನು ಕಾಪಾಡಲು ಅನುಕೂಲವಾಗುತ್ತಿದೆ.
- ಹಾಪ್ ಕಾಮ್ಸ್ ಗಳಲ್ಲಿ ಮೂಲಭೂತ ಸೌಕರ್ಯಗಳ ನಿರ್ಮಾಣದಿಂದಾಗಿ ಹೆಚ್ಚಿನ ಪ್ರಮಾಣದಲ್ಲಿ ಹಣ್ಣು ಮತ್ತು ತರಕಾರಿಗಳನ್ನು ರೈತರಿಂದ ಸಂಗ್ರಹಣೆ ಮಾಡಿ ಮಾರಾಟ ಮಾಡಲಾಗುತ್ತಿದೆ.
- ಹಣ್ಣುಗಳ ಮೇಳವನ್ನು ಆಯೋಜಿಸಿ ಆಯಾ ಜಿಲ್ಲೆಯಲ್ಲಿ ಬೆಳೆಯುವ ಹಣ್ಣುಗಳಿಗೆ ಪ್ರಚಾರ ಹಾಗೂ ಮಾರಾಟ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

**2. ಕರ್ನಾಟಕ ದ್ರಾಕ್ಷಾ ರಸ ಮಂಡಳಿ:**

- ಪ್ರಮುಖವಾಗಿ ದ್ರಾಕ್ಷಿ, ವೈನ್ ಹಾಗೂ ಇತರೆ ಹಣ್ಣುಗಳಾದ ಅನಾನಸ್, ಸೀಬೆ, ದಾಳಿಂಬೆ, ಬಾಳೆ ಇತ್ಯಾದಿ ಬೆಳೆಗಳಿಂದ ತಯಾರಾದ ವೈನ್ ನ್ನು ಉತ್ತೇಜಿಸುವುದು.
- ರೈತರು ಹಾಗೂ ಉದ್ಯಮಿದಾರರಿಗೆ ತಾಂತ್ರಿಕ ಸಲಹೆ ನೀಡುವುದು.

- ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಗೆ ಶ್ರೇಷ್ಠ ಮಟ್ಟದ ವೈನ್ ತಯಾರಿಸಲು ವೈನ್ ಟೆಸ್ಟಿಂಗ್ ಸೌಲಭ್ಯವನ್ನು ಒದಗಿಸುವುದು.
- ವೈನ್ ದ್ರಾಕ್ಷಿ ಪ್ರದೇಶ ಹಾಗೂ ವೈನ್ ದ್ರಾಕ್ಷಿ ಉತ್ಪಾದನೆಯಿಂದ ವೈನ್ ಮಾರಾಟವು ಕರ್ನಾಟಕ ವೈನ್ ಬೋರ್ಡ್ ಸ್ಥಾಪನೆ ಪೂರ್ವದಲ್ಲಿ 13.71 ಲಕ್ಷ ಲೀಟರ್ ಗಳಿಂದ ಪ್ರಸ್ತುತ 93.3 ಲಕ್ಷ ಲೀಟರ್ ಗೆ ಹೆಚ್ಚಾಗಿರುತ್ತದೆ.
- ವೈನ್ ಮಾರಾಟ ವಹಿವಾಟು ರೂ.11.00 ಕೋಟಿ ಯಿಂದ ಪ್ರಸ್ತುತ ರೂ.258.00 ಕೋಟಿ ಹೆಚ್ಚಾಗಿರುತ್ತದೆ.

**3. ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ (ನಿ)**

- ಮಾವು ಬೆಳೆಯಲ್ಲಿ ಅನುಸರಿಸಬೇಕಾದ ತಾಂತ್ರಿಕ ಬೇಸಾಯ ಪದ್ಧತಿಗಳು, ಸಸ್ಯ ಸಂರಕ್ಷಣಾ ಕ್ರಮಗಳು ಹಾಗೂ ಇನ್ನಿತರ ಪೂರಕ ಚಟುವಟಿಕೆಗಳ ಬಗ್ಗೆ ಸಲಹೆ/ಶಿಫಾರಸ್ಸುಗಳನ್ನು ಕಾಲಕಾಲಕ್ಕೆ ಮಾಹೆವಾರು ಕರ ಪತ್ರಗಳು, ಭಿತ್ತಿ ಪತ್ರ, ಕೈಪಿಡಿಗಳ ಮೂಲಕ ಮಾವು ಬೆಳೆಗಾರರಿಗೆ ಮಾಹಿತಿ ನೀಡಲಾಗುತ್ತಿದೆ ಹಾಗೂ ತರಬೇತಿ ಮತ್ತು ಪ್ರಾತ್ಯಕ್ಷತೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.
- ಕೊಯ್ಲು ಪೂರ್ವ ಮತ್ತು ಕೊಯ್ಲೋತ್ತರ ಚಟುವಟಿಕೆಗಳ ಬಗ್ಗೆ ತಾಂತ್ರಿಕ ತರಬೇತಿ, ಪ್ರಾತ್ಯಕ್ಷತೆ, ಹೊರ ರಾಜ್ಯ ಅಧ್ಯಯನ ಪ್ರವಾಸಗಳ ಮೂಲಕ ರೈತರಿಗೆ ಅರಿವು ಮೂಡಿಸಲಾಗುತ್ತಿದೆ.
- ಉತ್ತಮ ಗುಣಮಟ್ಟದ ಮಾವು ಉತ್ಪಾದನೆಗೆ ಬೇಕಾದ ಅವಶ್ಯಕ ಕೊಯ್ಲು ಪೂರ್ವ ಮತ್ತು ಕೊಯ್ಲೋತ್ತರ ಪರಿಕರಗಳಾದ ಮ್ಯಾಂಗೋ ಸ್ಪೆಷಲ್, KNO3, ಹೀಲರ್ ಕಮ್ ಸೀಲರ್, ಫ್ರೂಟ್ ಬ್ಯಾಗ್ಸ್, ಫೆರಮೋನ್ ಟ್ರ್ಯಾಪ್ಸ್, ಪ್ಲಾಸ್ಟಿಕ್ ಕ್ರೇಟ್ಸ್, ಕಾರ್ಟೂನ್ ಬಾಕ್ಸ್, ಕಡಿಮೆ ವೆಚ್ಚದ ಹಣ್ಣು ಮಾಗಿಸುವ ಘಟಕ, ಇಥಿಲಿನ್ ಕ್ಯಾನ್ಸ್ ಹಾಗೂ ಕಟಾವು ಸಲಕರಣೆ ಬಳಕೆಗೆ ಪ್ರೋತ್ಸಾಹಧನ ನೀಡಲಾಗುತ್ತಿದೆ.
- ನೇರ ಮಾರುಕಟ್ಟೆ ಉತ್ತೇಜನಕ್ಕಾಗಿ ಮಾವು ಮೇಳ, ಮ್ಯಾಂಗೋ ಪಿಕ್ಕಿಂಗ್ ಟೂರಿಸಂ, ಜಿಲ್ಲಾ ಮಟ್ಟದ ಮಾವು ಮೇಳ, ಆನ್ ಲೈನ್ ಮಾರುಕಟ್ಟೆಗಾಗಿ B2C ತಂತ್ರಾಂಶ (https://www.karsirimangoes.karnataka.gov.in), ರಫ್ತುದಾರರು/ಖರೀದಿದಾರರು ಮತ್ತು ಬೆಳೆಗಾರರ ಮಾರುಕಟ್ಟೆ ಸಂಪರ್ಕ ಸಮಾವೇಶಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಇದರಿಂದ ರೈತರ ಆದಾಯ ಹೆಚ್ಚಾಗಿ ಆರ್ಥಿಕವಾಗಿ ಸದೃಡಗೊಳ್ಳಲು ಸಹಾಯವಾಗುತ್ತಿದೆ.
- ಮಾವು ರಫ್ತು ಕೌಶಲ್ಯ ಕುರಿತು ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರದ (VTPC) ಸಹಯೋಗದೊಂದಿಗೆ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಇದರಿಂದ ರೈತರು ನೇರವಾಗಿ ಹೊರದೇಶಗಳಿಗೆ ರಫ್ತು ಮಾಡಲು ಕೈಗೊಳ್ಳಬೇಕಾದ ಸಿದ್ಧತೆಗಳ ಬಗ್ಗೆ ಅರಿವು ಮೂಡಿದೆ.
- ಉತ್ತಮ ಗುಣಮಟ್ಟದ ಉತ್ಪಾದನೆ ಉತ್ತೇಜಿಸಲು ಪೂರಕವಾಗಿ ಜಾಗತಿಕ ಉತ್ತಮ ಕೃಷಿ ಪದ್ಧತಿ (Global GAP) ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿದ್ದು ಉತ್ಪನ್ನದ ಗುಣಮಟ್ಟ ಉತ್ತಮಗೊಂಡಿದ್ದು ಗ್ಯಾಪ್ ಧೃಡೀಕೃತ ಮಾವಿನ ಹಣ್ಣುಗಳಿಗೆ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಾಗಿದೆ.
- ಮಾವು ಬೆಳೆಗಾರರ ಅನುಕೂಲಕ್ಕಾಗಿ ಮಾವು ಅಭಿವೃದ್ಧಿ ಕೇಂದ್ರ, ಮಾಡಿಕೆರೆ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಮಾವಿನ ಹಣ್ಣಿನ ವಿಂಗಡಣೆ, ಗ್ರೇಡಿಂಗ್, ಪ್ಯಾಕಿಂಗ್, ಬಿಸಿ ನೀರಿನ ಸಂಸ್ಕರಣೆ ಮತ್ತು ಎಥಿಲೀನ್ ಮೂಲಕ ಹಣ್ಣು ಮಾಗಿಸುವ ಘಟಕದ ಪ್ರಾತ್ಯಕ್ಷತ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.ಈ ಸೌಲಭ್ಯಗಳನ್ನು ರಫ್ತುದಾರರು ಮತ್ತು ಮಾವು ಬೆಳೆಗಾರರು ಬಳಸಿಕೊಂಡು ಗ್ರಾಹಕರ ಬೇಡಿಕೆಯನ್ವಯ ಉತ್ಪನ್ನವನ್ನು ಸಿದ್ಧಪಡಿಸಿ ಮಾರುಕಟ್ಟೆಗೆ ಸರಬರಾಜು ಮಾಡಲು ಅನುಕೂಲವಾಗಿದೆ.

**4. ಕರ್ನಾಟಕ ರಾಜ್ಯ ಸಾಂಬಾರು ಪದಾರ್ಥಗಳ ಅಭಿವೃದ್ಧಿ ಮಂಡಳಿ:**

- ಸಾಂಬಾರು ಬೆಳೆಗಾರರಿಗೆ ವಿವಿಧ ಯೋಜನೆಯಡಿ ಸಹಾಯಧನ ನೀಡಿ ಅವರಿಗೆ ಸಾಂಬಾರು ಬೆಳೆಗಳ ಉತ್ಪಾದನೆಗೆ ಹಾಗೂ ಮೌಲ್ಯ ವರ್ಧನೆಗೆ ಸಹಕರಿಸಿದೆ.
- ಸಾಂಬಾರು ಬೆಳೆಗಾರರಿಗೆ ತರಬೇತಿ ಮೂಲಕ ಸಾಂಬಾರು ಬೆಳೆಗಳ ಬಗ್ಗೆ ತಾಂತ್ರಿಕ ಮಾಹಿತಿಯನ್ನು ನೀಡಿದೆ.
- ಸಾಂಬಾರು ಮೇಳಗಳನ್ನು ಏರ್ಪಡಿಸಿ ರೈತರಿಗೆ ನೇರ ಮಾರುಕಟ್ಟೆಗೆ ಅವಕಾಶ ಕಲ್ಪಿಸಲಾಗಿದೆ.

- ಯಂತ್ರೋಪಕರಣಗಳನ್ನು ಬಳಸುವುದರಿಂದ ಗುಣಮಟ್ಟದ ಉತ್ಪನ್ನಗಳನ್ನು ಪಡೆಯುವುದಲ್ಲದೆ ಕಡಿಮೆ ಸಮಯದಲ್ಲಿ ಕೃಷಿ ಚಟುವಟಿಕೆಗಳನ್ನು ಪೂರ್ಣಗೊಳಿಸಲು ರೈತರಿಗೆ ಯಂತ್ರೋಪಕರಣಗಳ ಖರೀದಿಗೆ ಸಹಾಯಧನ ನೀಡಲಾಗಿದೆ.
- ಸಾಂಬಾರು ಪದಾರ್ಥಗಳ ಮೌಲ್ಯವರ್ಧನೆಗೆ ಅನುಕೂಲವಾಗಲು ಟಾರ್ಪಲಿನ ಶೀಟುಗಳನ್ನು ವಿತರಿಸಲಾಗಿದೆ.

**5. ಕರ್ನಾಟಕ ರಾಜ್ಯ ಲಿಂಬೆ ಅಭಿವೃದ್ಧಿ ಮಂಡಳಿ:**

- ಲಿಂಬೆ ಬೆಳೆಗಾರರಿಗೆ ಸಹಾಯಧನ ಮೊತ್ತದಲ್ಲಿ ಲಿಂಬೆ ಬೆಳೆಗೆ ಅನುಕೂಲವಾಗುವ ಪರಿಕರಗಳಾದ ಸಿಟ್ರಸ್ ಸ್ಪೇಷಲ್, ಹಾರ್ವೆಸ್ಟಿಂಗ್ ಟೂಲ್ಸ್, ಪ್ಲಾಸ್ಟಿಕ್ ಕ್ರೇಟ್ಸ್ ಮತ್ತು ಟಾರ್ಪಾಲಿನ ಗಳನ್ನು ಸಹಾಯಧನದ ಮೊತ್ತದಲ್ಲಿ ವಿತರಿಸಲಾಗಿದೆ.
- ಲಿಂಬೆ ಬೆಳೆಗಾರರಿಗೆ ಅನುಕೂಲವಾಗುವಂತೆ ಲಿಂಬೆ ಬೆಳೆಯ ಕುರಿತು ತಾಂತ್ರಿಕ ವಿಚಾರ ಸಂಕಿರಣ ಹಾಗೂ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.
- ಲಿಂಬೆ ಬೆಳೆಯ ತಾಂತ್ರಿಕ ಮಾಹಿತಿ ಕುರಿತು ಕೈಪಿಡಿಗಳನ್ನು ವಿತರಣೆ ಮಾಡಲಾಗುತ್ತಿದೆ.

**Yes.**
**The following benefits were gained by horticulture farmers through State Horticulture boards/ corporations via "Assistance to Horticulture Boards and Corporations scheme".**

**1. Karnataka State Co-operative Horticulture Marketing Federation (Ltd)**

- Plastic crates have been distributed to member farmers through District Hopcoms at 50% assistance to maintain quality of fruit and vegetables during storage and transport
- Facilitated the better infrastructure at Hopcoms to procure and selling of horticulture produce by farmers
- Promotion and marketing of fruits grown in the respective districts through organization of fruit fair.

**2. Karnataka Wine Board:**

- Encouraging wine prepared from Grapes mainly and also from Pineapple, Guava, Pomegranate and banana.
- Providing technical support to Farmers and Entrepreneurs.
- Providing wine testing facilities for wine making to meet the requirement of National and International markets.
- Wine sales were increased from 13.71 lakh liters in per-establishment of the board to 93.3 lakh liters
- Wine sale turnover is increased from Rs. 11.00 crore to 258.00 crore

**3. Karnataka State Mango Development and Marketing Corporation**

- Provided advice and recommendations on technical farming practices, plant protection measures and other ancillary practices in mango cultivation.
- Farmers are being educated about pre-harvest and post-harvest activities through technical training, demonstration and out-of-state study tours.
- The pre-harvest and post-harvest activities such as use of Mango Special, $KNO_3$, Healer Cum Sealer, Fruit Bags, Pheromone Traps, Plastic Crates, Cartoon Boxes, Low Cost Fruit Making Unit, Ethylene Cans and Harvest Equipment are being promoted.
- Mango Fair for Direct Market Promotion, Mango Picking Tourism, District Level Mango Fair, B2C Software for Online Markets (https://www.karsirimangoes.karnataka.gov.in), Exporter / Buyers &

| | | |
|---|---|---|
| | | Growers Market Contact Conferences are being held which helps th mango farmers to increase their income more economically.<br>• Training programs were organized to mango farmers in collaboratio with Vishweshwaraiah Business Promotion Center (VTPC) on expor skills.<br>• Implementation of the Global Good Agricultural Practices (Global G. Program to promote high quality production, and increased demand GAP certified mangoes in the market.<br>• Mango Development Centers were established at Madikeri, Chintamani Taluk, Chikkaballapur district with the facilities like mang fruit sorting, grading, packing, hot water treatment and ethylene fruit processing unit.<br><br>**4. Karnataka State Spice Development Board**<br><br>• Provided technical information on spice crops through training of growers.<br>• Provided subsidies to the growers for production and value addition the spice crop under the scheme<br>• Conducted Spice- fairs to provide direct market for farmers at district level.<br>• Provided the facility of purchasing the machinery at subsidized rates for the purpose of obtaining quality products<br>• Sheets of tarpaulins are distributed to facilitate the valuation of the spices.<br><br>**5. Karnataka State Lime Development Board**<br>Lemon growers are provided with subsidized amount of lemon crop tools su as citrus special, harvesting tools, plastic crates and tarpaulins.<br><br>• Conducted technical seminars and training programs on Lemon Crop for the benefit of Lemon growers..<br>• Distribution of manuals on technical information of Lemon crop. |

.No.HORTI 437 HGM 2021

(ಮುನಿರತ್ನ)
ತೋಟಗಾರಿಕೆ ಮತ್ತು ಯೋಜನೆ, ಕಾರ್ಯಕ್ರಮ
ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.